**ದಿನಾಂಕಃ 16.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಕ್ಲೇಮೆಂಟ್ 2, 4 ರಿಂದ 6 ರ ಪರ ವಕೀಲರಿಂದಃ-**

ನಾನು ಪಿಯುಸಿ ವರೆಗೆ ಓದಿದ್ದೇನೆ. ನಾನು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದಿದ್ದೇನೆ. ಬೈಯಣ್ಣ ನನ್ನ ತಾತ ಇರುತ್ತಾರೆ, ತಿಪ್ಪಮ್ಮ ಸದರಿ ಬಯ್ಯಣ್ಣನ ಹೆಂಡತಿ ಇರುತ್ತಾರೆ. ಸದರಿ ಬಯ್ಯಣ್ಣನಿಗೆ 6 ಮಕ್ಕಳಿದ್ದು ಅವರುಗಳು ಎಂದರೆ ಶಾರಧ, ಜಯ್ಯಮ್ಮ, ಪಾರ್ವತಮ್ಮ, ಲಕ್ಷ್ಮಮ್ಮ, ಸರಸ್ವತಮ್ಮ ಮತ್ತು ನನ್ನ ತಂದೆ ರಾಮಚಂದ್ರ ಇರುತ್ತಾರೆ. ನನ್ನ ತಂದೆ ರಾಮಚಂದ್ರನಿಗೆ 3 ಮಂದಿ ಹೆಂಡತಿಯರು ಇದ್ದರು ಅನ್ನುವುದು ನಿಜ. ಕ್ಲೆಮೆಂಟ್ ನಂ.2 ನಾರಾಯಣಮ್ಮ ನನ್ನ ತಂದೆ ರಾಮಚಂದ್ರರವರ ಮೊದಲನೇ ಹೆಂಡತಿ ಅನ್ನುವುದು ನಿಜ. ರಾಮಚಂದ್ರ ಮತ್ತು ನಾರಾಯಣಮ್ಮ ರವರಿಗೆ ಮಂಜುನಾಥ ಮತ್ತು 6 ನೇ ಕ್ಲೇಮಂಟ್ ಸುಜಾತ ಅನ್ನುವ ಮಕ್ಕಳಿದ್ದಾರೆ. ಮಂಜುನಾಥ ಮರಣಹೊಂದಿದ್ದು ಆತನ ಮಕ್ಕಳು ಕ್ಲೇಮಂಟ್ 4 ಮತ್ತು 5 ಅಂದರೆ ಅನುಶ ಮತ್ತು ಚಂದನ್ ಇರುತ್ತಾರೆ ಎಂದರೆ ಸಾಕ್ಷಿ ಮಂಜುನಾಥನ ಬಗ್ಗೆ ಮಾತ್ರ ಗೊತ್ತಿದೆ, ಅವರ ಮಕ್ಕಳ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ನನ್ನ ತಂದೆಯ 2 ನೇ ಹೆಂಡತಿ ಕೋಮಲ ಅನ್ನುವುದು ನಿಜ. ಸದರಿ ಕೋಮಲನಿಗೆ ಯಾವುದೇ ಮಕ್ಕಳು ಇರಲಿಲ್ಲ. ಸದರಿ ಕೋಮಲ ಜೀವಂತ ಇಲ್ಲ. ಸದರಿ ಕೋಮಲ ಯಾವಾಗ ಮರಣ ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಶ್ರೀ ಮತಿ ವಜ್ರಮ್ಮ ನನ್ನ ತಂದೆಯ 3 ನೇ ಹೆಂಡತಿ ಇರುತ್ತಾರೆ ಅನ್ನುವುದು ನಿಜ. ನನ್ನ ತಾಯಿ ವಜ್ರಮ್ಮನಿಗೆ ರತ್ನಮ್ಮ ಎಂದು ಕರೆಯುತ್ತಿದ್ದರು ಅನ್ನುವುದು ನಿಜ. ನನಗೆ ಲಕ್ಷ್ಮಿ ಅನ್ನುವ ಅಕ್ಕ ಹಾಗೂ ಆನಂದ ಅನ್ನುವ ತಮ್ಮ

ನಿದ್ದಾನೆ. ನಾನು, ನನ್ನ ಅಕ್ಕ ಮತ್ತು ತಮ್ಮ ಜೊತೆಯಾಗಿಲ್ಲ, ಬೇರೆ ಬೇರೆ ಇದ್ದೇವೆ. ನನ್ನ ತಾತ ಬೈಯಣ್ಣ ಬಡಗಿ ಕೆಲಸ ಮಾಡುತ್ತಿದ್ದರು ಅನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಬೈಯಣ್ಣ ತನ್ನ ಕೊನೆಯ ಕಾಲದವರೆಗೂ ಕೂಡ ಬಡಗಿ ಕೆಲಸ ಮಾಡುತ್ತಿದ್ದರು ಅನ್ನುವ ಬಗ್ಗೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಪದ್ಮ ಪ್ರಸಾದ್ )**
**2 ನೇ ಅಪರ ನಗರ ಸಿವಿಲ್ ಮತ್ತು**
**ವಿಶೇಷ ನ್ಯಾಯಾಧೀಶರು, ಬೆಂಗಳೂರು ನಗರ.**